ಇಷ್ಟವಾಗಲಿಲ್ಲ. 'ಅಮ್ಮ ನೀನು ಅವರಿಗೆ ತುಂಬ ಸದರ ಕೊಡುತ್ತಿದ್ದೀಯ, ಮುಂದೆ ಪಶ್ಚಾತ್ತಾಪ ಪಡುವಿ. ನಿನ್ನ ನಾದಿರಶಾಹಿ ಎಲ್ಲ ನಮ್ಮ ಹೆಣ್ಣುಮಕ್ಕಳ ಮೇಲೆಯೇ ಇತ್ತಲ್ಲವೇ? ಆಗ ನಾವು ಆರು ತಿಂಗಳಿಗೋ, ವರ್ಷಕ್ಕೊ ಒಮ್ಮೆ ಕಾಡಿ ಬೇಡಿ ಸಿನಿಮಾಕ್ಕೆ ಹೋಗುತ್ತಿದ್ದೆವು. ಸ್ನೇಹಿತೆಯರ ಮನೆಗೆ ಹೋಗಬೇಕಾದರೆ ಕೂಡ ಮನೆಯ ಕೆಲಸಗಳನ್ನೆಲ್ಲ ಮುಗಿಸಿ ಹೋಗಬೇಕಾಗುತ್ತಿತ್ತು. ಈಗ ಈ ವಯಸ್ಸಿನಲ್ಲಿ ನಿನಗೆ ಮಗ ಸೊಸೆಯ ಮೇಲೆ ಇಲ್ಲದ ವ್ಯಾಮೋಹ ಅಲ್ಲವೇ?'

'ಮಗಳೇ, ಸಮಯಕ್ಕೆ ತಕ್ಕಂತೆ ನಾವೂ ಬದಲಾಗಬೇಕಾಗುತ್ತದಮ್ಮ.'

'ನೀವೆಲ್ಲ ಒಂದೇ ಅಮ್ಮ, ಅಲ್ಲಿ ಅತ್ತೆಯ ಮನೆಯಲ್ಲೂ ಇದೇ ಹಾಡು. ನನ್ನ ಅದೃಷ್ಟವೇ ಚೆನ್ನಾಗಿಲ್ಲ. ನಾನು ಇಲ್ಲಿಯೂ ಅನುಭವಿಸಿದೆ, ಅಲ್ಲಿಯೂ ಅನುಭವಿಸುತ್ತಿದ್ದೇನೆ. ಆಗ ಅತ್ತೆ–ಮಾವ ಇಲ್ಲದ ಕಾನೂನು ಹೇಳುತ್ತಿದ್ದರು. ಉಡು ತೊಡುವುದರಲ್ಲಾಗಲೀ, ಎಲ್ಲಿಗಾದರೂ ಹೋಗಿ ಬರುವುದರಲ್ಲಾಗಲೀ, ಫ್ರೀಯಾಗಿ ನಗುವುದರಲ್ಲಾಗಲೀ, ಮಾತಾಡುವುದರಲ್ಲಾಗಲೀ ಇಲ್ಲದ ಬಂಧನವಿತ್ತು. ಈಗ ಅವರೂ ಕೂಡ ನಿನ್ನಂತೆ ಬಣ್ಣ ಬದಲಾಯಿಸಿದ್ದಾರೆ. ಸೀಮಾ ಅದೇನು ಮೋಡಿ ಮಾಡಿದ್ದಾಳೋ, ಅವಳು ಏನೇ ಮಾಡಿದರೂ ಎಲ್ಲಿಗೇ ಹೋದರೂ ಯಾಕೆ ಎಂದು ಕೇಳುವುದಿಲ್ಲ. ಅವಳಿಗೆ ಯಾವ ಬಂಧನವೂ ಇಲ್ಲ.'

'ನೌಕರೀ ಮಾಡುತ್ತಾಳಲ್ಲವೇ, ಅವಳನ್ನ ಹಾಗೆ ನೋಡಿಕೊಳ್ಳಲೇಬೇಕಾಗುತ್ತದೆ.'

'ಅಂದರೆ, ನನಗೆ ನೌಕರಿ ಮಾಡುವ ಯೋಗ್ಯತೆ ಇರಲಿಲ್ಲವೇ? ಅತ್ತೆ ಸ್ಪಷ್ಟವಾಗಿ ಹೇಳಿದ್ದರು: ನೀನು ಕೆಲಸಕ್ಕೆ ಹೋಗುವುದಾದರೆ ನನ್ನಿಂದ ಮಕ್ಕಳನ್ನು ನೋಡಿಕೊಳ್ಳುವುದಾಗುವುದಿಲ್ಲ. ನಿಮ್ಮ ಮಕ್ಕಳನ್ನು ನೀವೇ ನೋಡಿಕೊಂಡು ಏನುಬೇಕಾದರೂ ಮಾಡಿಕೊಳ್ಳಿ. ಆಯಾಗಿರಿ ನನ್ನಿಂದಾಗುವುದಿಲ್ಲ ಎಂದು. ಈಗ ಅವಳ ಮಗುವನ್ನು ನೋಡಿಕೊಳ್ಳುತ್ತಿಲ್ಲವೇ? ಹಾಗೆ ನೋಡಿಕೊಳ್ಳುತ್ತಿರುವವಳು ನಾನೇ. ಹೆಸರು ಮಾತ್ರ ಅವರದು.'

'ಮಗಳೇ, ಒಂದು ಮಾತು ಹೇಳಲೇ?' ಅಮ್ಮನ ಸ್ವರ ಗಂಭೀರವಾಗಿತ್ತು.

'ರಶ್ಮಿಯ ಎದುರಿಗೆ ಮಾತ್ರ ನಿನ್ನ ಈ ರಾಮಾಯಣವನ್ನೆಲ್ಲ ಹೇಳಬೇಡ. ಚೆನ್ನಾಗಿರುವುದಿಲ್ಲ.'

'ಅಂದರೆ?'

'ಏನಿಲ್ಲ, ನಾಳೆ ಅವಳು ಎಲ್ಲವನ್ನೂ ತನ್ನ ತವರುಮನೆಯವರೆದುರಿಗೆ ಹೇಳುತ್ತಾಳೆ. ಇಲ್ಲವೇ ನಿಮ್ಮ ಮಗಳು ಅತ್ತೆಯ ಮನೆಯಲ್ಲಿ ಹೊಂದಿಕೊಂಡಿಲ್ಲವೇ? ಎಂದು ನನ್ನನ್ನೇ ಕೇಳಬಹುದು.' ನನಗೆ ಆಶ್ಚರ್ಯವಾಯಿತು. ನಾನು ಅವರ ಬಗ್ಗೆ ಹೇಳುತ್ತಿದ್ದ ದೂರುಗಳನ್ನು ಎಷ್ಟು ಆಸ್ಥೆಯಿಂದ ಕೇಳುತ್ತಿದ್ದಳಲ್ಲ, ಇವಳು ಅದೇ ಅಮ್ಮನೇ!

ಮೂರು ವರ್ಷಗಳ ಹಿಂದೆ ನನ್ನ ಮೈದುನನ ಮದುವೆಯಾದ ಮೇಲಂತೂ ನನ್ನ ಆಕ್ರೋಶ ಇನ್ನೂ ಹೆಚ್ಚಾಗಿತ್ತು. ಸೀಮಾಳನ್ನು ಮನೆಯಲ್ಲಿ ಎಲ್ಲರೂ ಹಾಡಿ ಹೊಗಳುವವರೇ. ಅತ್ತೆ ಅವಳ ರೂಪ–ಗುಣಗಳನ್ನು ಹೊಗಳಿದರೆ, ಮಾವ ಅವಳು ಮಾಡುವ ಅಡಿಗೆಯನ್ನು. ಇವರೂ ಕೂಡ ಅವಳ ನಡತೆಯ ಪ್ರಶಂಸಕರೇ ಆಗಿದ್ದಾರೆ. ನನ್ನ ಮಕ್ಕಳು ಪ್ರತೀಕ–ಪ್ರತಿಭಾ ಕೂಡ ಚಿಕ್ಕಮ್ಮ–ಚಿಕ್ಕಮ್ಮ ಎಂದು ಅವಳ ಹಿಂದೆಯೇ ಇರುತ್ತಾರೆ. ನಾನು ಹತ್ತು ವರ್ಷಗಳಿಂದಲೂ ಆ ಮನೆಗಾಗಿ ದೇಹ ಸವೆಸುತ್ತಿದ್ದೇನೆ – ಅದಕ್ಕೆ ಯಾವ ಬೆಲೆಯೂ ಇಲ್ಲವಾಗಿದೆ. ನನ್ನ ಬಿ.ಎಸ್ಸಿ. ಡಿಗ್ರಿಗೆ ಗೌರವವೇ ಇಲ್ಲ. ಅವಳು ಮಾಡುತ್ತಿರುವ ಬ್ಯಾಂಕ್ ಕೆಲಸವನ್ನೇ ಕಲೆಕ್ಟರ್–ಕಮೀಷನರ್ ಕೆಲಸವೇನೋ ಎನ್ನುವಂತೆ ನೋಡುತ್ತಾರೆ. ತುಂಬ ಬೇಸರವಾದರೆ ಆಗ ಅಮ್ಮನ ಮನೆಗೆ ಬರುತ್ತಿದ್ದೆ. ನನ್ನ ಮನದಳಲನ್ನು ಹೇಳಿಕೊಂಡರೆ ಸ್ವಲ್ಪ ಸಮಾಧಾನವಾಗುತ್ತಿತ್ತು. ಆದರೆ ಈಗೀಗ